ಹೊಸಮನೆ ಕಟ್ಟಿಸಿಕೊಳ್ಳುವ ಕನಸನ್ನು ಅವರ ಮುಖದಲ್ಲಿ ಯಾರಾದರೂ ಗುರುತಿಸಬಹುದಿತ್ತು. 'ಈಗ ಸೋಮಾರಿಗಳ ಸಿಂಹಾಸನಗಳಿಂತಿದ್ದ ಜಗುಲಿ ಕಟ್ಟೆಗಳು ಕಣ್ಮರೆಯಾದವು; ಅವುಗಳ ಮೇಲೆ ಆಸೀನರಾಗಿ ವಾಹನ ಎಣಿಕೆ ಮಾಡುತ್ತ ಪಟ್ಟಾಂಗ ಹೊಡೆಯುತ್ತಿದ್ದ ಗಂಡಸರ ಕತೆ ಇಲ್ಲಿಗೆ ಮುಗಿಯಿತು' ಎಂದು ನಾನು ಭಾವಿಸಿದೆ. ಆದರೆ ಗಂಡಸರು ಹೊಸ ರಸ್ತೆಗೆ ಕಟ್ಟಲಾದ ಕಾಂಕ್ರೀಟ್ ಡಿವೈಡರನ್ನೇ ಜಗಲಿಕಟ್ಟೆಯನ್ನಾಗಿ ಮಾಡಿಕೊಂಡು ಸ್ಥಳಾಂತರಗೊಂಡರು. ಅಲ್ಲಿಗೇ ಟೀ ವಡೆ ತರಿಸಿಕೊಂಡು, ಟವೆಲ್ಲು ಹಾಸಿ ಅದರ ಮೇಲೆ ರಮ್ಮಿ ಆಟ ಶುರುಮಾಡಿದರು. ಈಗಲೂ ಅವರ ಮನೆಗೆ ಹೋಗಿ 'ಯಕಾ! ಅಣ್ಣೆಲ್ಲಿ?' ಎಂದು ಕೇಳಿದರೆ, 'ಇಲ್ಲೇ ರೋಡಿಗೆ ಹೋಗ್ಯಾನ', 'ಅಲ್ಲೇ ರೋಡ್ ಮ್ಯಾಲದಾನ ನೋಡು' ಎಂಬ ತಾತ್ಸಾರದ ಜವಾಬು ಸಿಗುತ್ತದೆ. ರೋಡಿಗೂ ಮನೆಗೂ ಭೇದವೆಣಿಸದೆ ಅದ್ವೈತಿಯಂತಿದ್ದ ಒಬ್ಬ ಮುದುಕನಿಗೆ, ನಂದಿಕೋಲಿನಂತಹ ಊರುದೊಣ್ಣೆಯನ್ನು ರೋಡಿಗೆ ಚಾಚಿಕೊಂಡು, ರಸ್ತೆ ವಿಭಜಕದ ಮೇಲೆ ಕೂತು ಮೊಮ್ಮಗನನ್ನು ಆಡಿಸುತ್ತ, ಬೆಳಗಿನ ಬಿಸಿಲು ಕಾಸುವ ಚಟವಿತ್ತು. ನಾನೊಮ್ಮೆ ಸ್ಕೂಟರು ನಿಲ್ಲಿಸಿ, ಅಡ್ಡಡ್ಡ ಮಲಗಿದ್ದ ದಂಡವನ್ನು ಎತ್ತಿ ಮಡಿಲಿಗಿಟ್ಟು 'ಇದರ ಮೇಲೆ ಚಕ್ರಗಿಕ್ರ ಹತ್ತಿದರೆ ಏನ್ಮಾಡ್ತೀಯಾ?' ಎಂದು ಕೇಳಿದೆ. 'ಯಾವನ್ ಹತ್ತಸ್ತಾನೆ? ಹತ್ತಸಲಿ ನೋಡನ. ಅವನಪ್ಪಂದೇ ರೋಡು?' ಎಂದು ನನ್ನನ್ನೆ ಪ್ರಶ್ನಿಸಿದ. ಅವನು ಹಕ್ಕುಪ್ರಜ್ಞೆಯಿಂದ ಕೇಳಿದ್ದರಲ್ಲಿ ನ್ಯಾಯವಿದೆ. ರೋಡಿಗೆ ತನ್ನೆದೆಯ ಮೇಲಾಡುವ ಎಲ್ಲರೂ ಮಕ್ಕಳೇ. ಅವರಲ್ಲಿ ವಾಹನದವರ ದೊಡ್ಡಸ್ತಿಕೆ ಏನು? ಇಂತಹ ಸಮಾಜವಾದಿ ಪ್ರಜ್ಞೆಯುಳ್ಳ ಜನರಿರುವಾಗ, ಹಂಪಿರೋಡಿಗೆ ಪ್ರತ್ಯೇಕ ರಸ್ತೆಯುಬ್ಬುಗಳ ಅಗತ್ಯವೇಕೊ ತಿಳಿಯದು. ಎಷ್ಟೇ ಸ್ಪೀಡಿರಲಿ, ವಾಹನಗಳು ಈ ನಿರಂಕುಶಮತಿಗಳ ಟ್ರಾಫಿಕ್ ಸೆನ್ಸಿಗೆ ಅಳುಕಿ, ವೇಗಕ್ಕೆ ಸ್ವಯಂಮಿತಿ ಅಳವಡಿಸಿಕೊಳ್ಳುವರು.

ಒಮ್ಮೆ ವಿಶ್ವವಿದ್ಯಾಲಯಕ್ಕೆ ಬರುವ ಬಸ್ಸಿನ ಡ್ರೈವರಿಗೆ 'ನೀವೆಲ್ಲ ಹೆಂಗ್ ಡ್ರೈವ್ ಮಾಡ್ತೀರಪ್ಪ ಈ ರೋಡಲ್ಲಿ!' ಎಂದು ಚಾಡಿಕೋರ ಸಹಾನುಭೂತಿ ಪ್ರಕಟಿಸಿದೆ. ಅದಕ್ಕಾತ 'ಅಯ್ಯೊ, ಅದಕ್ಕೆಲ್ಲ ತಲೆ ಕೆಡಿಸಿಕೊಂಡ್ರೆ ಬದುಕು ಮಾಡಕಾದತ ಸಾರು? ನಾವೇ ಅಡ್ಜಸ್ಟ್ ಮಾಡ್ಕೆಂಡು ಹೋಕ್ತೀವಿ' ಎಂದು ಬದಲು ಹೇಳಿದ. ನಿಜ, ಇಂತಹ ಸಹನಾಶೀಲರು ಇರುವುದರಿಂದಲೇ ಹಂಪಿರೋಡಿನಲ್ಲಿ ಈತನಕ ದೊಡ್ಡ ಅಪಘಾತ ಸಂಭವಿಸಿಲ್ಲ.

**3**

ಹಂಪಿರೋಡಲ್ಲಿ ಜನರಿಗಿಂತ ಪಶು ಪಕ್ಷಿಗಳ ವ್ಯವಹಾರವೇ ಅಧಿಕ. ಕಚೇರಿಗೆ ಹೋಗುವ ಸಮಯಕ್ಕೆ ಸರಿಯಾಗಿ ಇಲ್ಲಿನ ದನ, ಕುರಿ, ಆಡು, ಎಮ್ಮೆ ಮೇಯಲು ಗುಡ್ಡಕ್ಕೆ ಹೊರಡುತ್ತವೆ. ಇದರಿಂದ ರಸ್ತೆತಡೆ ನಿತ್ಯೋತ್ಸವವಾಗಿದೆ. ಸಂಜೆ ಬರುವಾಗಲೂ ಇದೇ ಕತೆ. ಯಾರವಸರ ಮಾಡಿದರೂ ಅನಾಹುತ ತಪ್ಪಿದ್ದಲ್ಲ. ಒಮ್ಮೆ—ಈಗಲೂ ನೆನೆದರೆ ಮೈಕಂಪಿಸುತ್ತದೆ—ಬೆಳಗಿನ ಒಂಬತ್ತು ಗಂಟೆಯಿಬೇಕು, ದನದ ಮಂದೆ ನಿಧಾನಗತಿಯಲ್ಲಿ ಪವರ್ ಕೆನಾಲಿನ ಇಕ್ಕಟ್ಟು ಸೇತುವೆಯಲ್ಲಿ ಹಾಯುತ್ತಿತ್ತು. ಬಸ್ಸಿನ ಚಾಲಕ ಹಾರ್ನ್ ಬಜಾಯಿಸುತ್ತ ಜಾಗ ಮಾಡಿಕೊಂಡು ನುಸುಳುತ್ತಿದ್ದ. ಅಷ್ಟರಲ್ಲಿ ಆಗಷ್ಟೇ ಎಳೆತನ ಕಳೆದು ಪ್ರಾಯಕ್ಕೆ ಬರುತ್ತಿದ್ದ ಹೋರಿಯೊಂದು, ಕಡಸಿನ ಬೆನ್ನ ಮೇಲೆ ಕಾಲೂರಿ ಮೆಟ್ಟುತ್ತ ವೇಗವಾಗಿ ಬಂದು ತಟ್ಟನೆ ಬಸ್ಸಿನಡಿ ಸಿಲುಕಿಬಿಟ್ಟಿತು. ಸಾಯಲಿಲ್ಲ. ಆದರೆ ಬೆನ್ನಚರ್ಮ ಹಿಸಿದುಹೋಯಿತು. ವ್ಯಂಗ್ಯವೆಂದರೆ, ಇದು ನಡೆದಿದ್ದು ವಾಲ್ಮೀಕಿ ಆಶ್ರಮದ ಎದುರು; ಮಿಥುನದಲ್ಲಿರುವ ಕ್ರೌಂಚಪಕ್ಷಿಯನ್ನು ವ್ಯಾಧನೊಬ್ಬ ಕೊಂದಾಗ ಶೋಕದಿಂದ ಶ್ಲೋಕ ಕಟ್ಟಿದ ಕವಿಯ ಸಮ್ಮುಖದಲ್ಲಿ. ಅಂದಿನಿಂದ ನಾನು, ತರಗತಿಗೆ ಕೊಂಚ ತಡವಾದರೂ ಅಡ್ಡಿಯಿಲ್ಲ —ವಿದ್ಯಾರ್ಥಿಗಳೂ ಇದನ್ನೇ ಬಯಸುತ್ತಾರೆ— ಆರಾಮಾಗಿ ಹೋಗುತ್ತೇನೆ. ನಾವು ತರಗತಿಗೆ